ಇಂಗ್ಲಿಷ್ ಮೂಲ: ಡಬ್ಲ್ಯು. ಸಾಮರ್ಸೆಟ್ ಮ್ವಾಮ್
ಕನ್ನಡಕ್ಕೆ: ಜೆ.ವಿ. ಕಾರ್ಲೊ

ಕಲೆ: ವೆಂಕಟ್ರಮಣ ಭಟ್

# ಒಂದು ಜುಜುಬಿ ಮಟನ್ ಚಾಪ್ಸ್, ಅಷ್ಟೇ!

ರಂಗಮಂದಿರದ ಮುಂದಿನ ಸಾಲಿನಲ್ಲಿ ಕುಳಿತಿದ್ದ ಅವಳ ಮೇಲೆ ಆಕಸ್ಮಿಕವಾಗಿ ನನ್ನ ಕಣ್ಣು ಹೊರಳಿತು. ಅದೇ ಕ್ಷಣದಲ್ಲಿ, ಕಾಕತಾಳೀಯವೆಂಬಂತೆ ಅವಳೂ ನನ್ನ ಕಡೆಗೆ ಕತ್ತನ್ನು ಹೊರಳಿಸಿ ನನ್ನನ್ನು ಪತ್ತೆಹಚ್ಚಿ ಕೈಬೀಸುತ್ತಾ ತನ್ನತ್ತ ಕರೆದಳು. ನಾಟಕದ ಮಧ್ಯಂತರ ವೇಳೆಯಲ್ಲಿ ನಾನು ಅವಳ ಬಳಿಗೆ ಹೋಗಿ ಅವಳ ಪಕ್ಕದ ಆಸನದಲ್ಲಿ ಕುಳಿತುಕೊಂಡೆ. ಅದೆಷ್ಟೋ ಕಾಲದ ಅನಂತರ ನಾನು ಅವಳನ್ನು ಭೇಟಿಯಾಗುತ್ತಿರುವುದು. ಯಾರೋ ಅವಳ ಹೆಸರು ಹಿಡಿದು ಕೂಗಿರದಿದ್ದಲ್ಲಿ ನನಗೆ ಅವಳ ಹೆಸರೇ ಗೊತ್ತಾಗುತ್ತಿರಲಿಲ್ಲ.

ನನ್ನನ್ನು ನೋಡುತ್ತಿದ್ದಂತೆ ಅವಳ ಮುಖ ಊರಗಲ ಅರಳಿತು.

"ಓಹ್, ದೇವರೇ! ಎಷ್ಟೊಂದು ವರ್ಷಗಳಾದವಲ್ಲ? ಕಾಲ ಎಷ್ಟೊಂದು ವೇಗವಾಗಿ ಸರಿದು ಹೋಗುತ್ತದೆ, ಗೊತ್ತೇ ಆಗುವುದಿಲ್ಲ. ವಯಸ್ಸು ಅನ್ನುವುದೂ ಒಂದು ವಿಚಿತ್ರ ಸಂಖ್ಯೆಯಲ್ವಾ? ನಮ್ಮ ಮೊದಲ ಭೇಟಿಯ ನೆನಪೇನಾದರೂ ಇದೆಯಾ?... ನೀವು ನನಗೆ ಲಂಚ್‌ಗೆ ಆಹ್ವಾನಿಸಿದ್ದೀರಿ..."

ಆ ದಿನವನ್ನು ನಾನು ಮರೆಯುವುದುಂಟೇ?!

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು...

ನಾನು ಆಗ ಪ್ಯಾರಿಸಿನಲ್ಲಿದ್ದೆ. ಒಂದು ಸಣ್ಣ ಅಪಾರ್ಟ್‌ಮೆಂಟ್‌ನಲ್ಲಿ ನನ್ನ ವಾಸ. ಕಾಲಿಗೆಳೆದರೆ ತಲೆಗಿಲ್ಲ, ತಲೆಗೆಳೆದರೆ ಕಾಲಿಗಿಲ್ಲ ಎಂಬಂತಿತ್ತು ನನ್ನ ಆರ್ಥಿಕ ಪರಿಸ್ಥಿತಿ.

